ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

# A

**CCE RF**
**CCE RR**

**ಸಂಕೇತ ಸಂಖ್ಯೆ : 96-K**

**Code No. : 96-K**

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 01. 04. 2022 ] [ Date : 01. 04. 2022
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.



Question Paper Serial No. **101**

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಕಡಿಮೆ ರಾಷ್ಟ್ರೀಯ ಆದಾಯವನ್ನು ಹೊಂದಿರುವ ರಾಷ್ಟ್ರ

(A) ನೇಪಾಳ

(B) ಚೀನಾ

(C) ಭಾರತ

(D) ಜಪಾನ್

2. 1955 ರಲ್ಲಿ ರಾಷ್ಟ್ರೀಕರಣಗೊಂಡ ಬ್ಯಾಂಕ್

(A) ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

(B) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

(C) ಕೆನರಾ ಬ್ಯಾಂಕ್

(D) ಯೂನಿಯನ್ ಬ್ಯಾಂಕ್

3. ಅನುತ್ಪಾದಕ ಕೃಷಿ ಸಾಲ ಎಂದರೆ

(A) ಸಾಮಾಜಿಕ ಕಾರ್ಯಗಳಿಗೆ ನೀಡುವ ಸಾಲ

(B) ಭೂಮಿ ಕೊಳ್ಳಲು ನೀಡುವ ಸಾಲ

(C) ನೀರಾವರಿ ಸೌಲಭ್ಯಕ್ಕಾಗಿ ನೀಡುವ ಸಾಲ

(D) ಶಾಶ್ವತ ಭೂ ಅಭಿವೃದ್ಧಿಗೆ ನೀಡುವ ಸಾಲ

4. ಸಾಮಾನ್ಯವಾಗಿ ಕ್ಷಾಮ, ಬರಗಾಲ, ಪ್ರವಾಹ ಮುಂತಾದವುಗಳ ಸಂದರ್ಭದಲ್ಲಿ ಸರ್ಕಾರ ರೈತರಿಗೆ ನೀಡುವ ಸಾಲ

(A) ದೀರ್ಘಾವಧಿ ಸಾಲ

(B) ಅಲ್ಪಾವಧಿ ಸಾಲ

(C) ಮಧ್ಯಮಾವಧಿ ಸಾಲ

(D) ತಕ್ಕಾವಿ ಸಾಲ

5. ರಾಷ್ಟ್ರೀಯ ಕೈಗಾರಿಕೆಗಳ ಮಂಡಳಿ / ನಿಗಮವನ್ನು ಸ್ಥಾಪಿಸಿದ ವರ್ಷ

(A) 1951

(B) 1953

(C) 1955

(D) 1965

6. "ಕೈಗಾರೀಕರಣಗೊಳಿಸಿ ಇಲ್ಲವೇ ವಿನಾಶವಾಗಿ" ಎಂದು ಹೇಳಿದವರು

(A) ಮಹಾತ್ಮ ಗಾಂಧಿ

(B) ಸರ್ ಎಂ. ವಿಶ್ವೇಶ್ವರಯ್ಯ

(C) ಜವಾಹರಲಾಲ್ ನೆಹರೂ

(D) ಡಾ. ಬಿ.ಆರ್. ಅಂಬೇಡ್ಕರ್

7. 20 ಅಂಶಗಳ ಕಾರ್ಯಕ್ರಮದ ಮುಖ್ಯ ಗುರಿ

(A) ಉಚಿತ ಶಿಕ್ಷಣ ನೀಡುವುದು

(B) ಬಡತನ ನಿರ್ಮೂಲನೆ ಮಾಡುವುದು

(C) ಉಚಿತ ಆರೋಗ್ಯ ಸೌಲಭ್ಯ ಒದಗಿಸುವುದು

(D) ವಸತಿ ಸೌಲಭ್ಯ ಒದಗಿಸುವುದು

8. 1952 ರಲ್ಲಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಜಾರಿಗೊಳಿಸಿದ ಯೋಜನೆ

(A) ಕೂಲಿಗಾಗಿ ಕಾಳು ಯೋಜನೆ

(B) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ

(C) ಸಮುದಾಯ ಅಭಿವೃದ್ಧಿ ಯೋಜನೆ

(D) ಜವಾಹರ್ ರೋಜ್‌ಗಾರ್ ಯೋಜನೆ

9. ಬ್ರಾಡ್‌ಗೇಜ್ ಸಂಬಂಧಿಸಿರುವುದು

(A) ರೈಲು ಸಾರಿಗೆ

(B) ಜಲ ಸಾರಿಗೆ

(C) ವಾಯು ಸಾರಿಗೆ

(D) ರಸ್ತೆ ಸಾರಿಗೆ

10. ರಿಕ್ಸ್ ಬ್ಯಾಂಕ್ ಇರುವುದು

(A) ಜಪಾನ್‌ನಲ್ಲಿ

(B) ಸ್ವೀಡನ್ನಿನಲ್ಲಿ

(C) ಭಾರತದಲ್ಲಿ

(D) ಇಂಗ್ಲೆಂಡ್‌ನಲ್ಲಿ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ನೈಋುತ್ಯ ರೈಲ್ವೆ | (i) ಚೆನ್ನೈ |
| (B) ದಕ್ಷಿಣ ರೈಲ್ವೆ | (ii) ಮುಂಬಯಿ |
| (C) ಪೂರ್ವ ರೈಲ್ವೆ | (iii) ನವ ದೆಹಲಿ |
| (D) ಮಧ್ಯ ರೈಲ್ವೆ | (iv) ಅಲಹಾಬಾದ್ |
| (E) ಉತ್ತರ ರೈಲ್ವೆ | (v) ಕೊಲ್ಕತ್ತಾ |
| | (vi) ಜೈಪುರ |
| | (vii) ಹುಬ್ಬಳ್ಳಿ |

**III. ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಮೇಯರ್ ಮತ್ತು ಬಾಲ್ಡವಿನ್‌ರವರ ಪ್ರಕಾರ ಆರ್ಥಿಕ ಅಭಿವೃದ್ಧಿ ಎಂದರೇನು ?

13. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಏಕೆ ಅಭಿವೃದ್ಧಿಪಡಿಸಲಾಗಿದೆ ?

14. ಭಾರತದ ಮಾನವ ಅಭಿವೃದ್ಧಿ ಸಾಧನೆಯು ಕುಂಠಿತಗೊಂಡಿದೆ. ಏಕೆ ?

15. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಏಕೆ ಆರಂಭಿಸಲಾಗಿದೆ ?

16. 1947 ರಲ್ಲಿ ಭಾರತಕ್ಕೆ ಕೈಗಾರಿಕಾ ನೀತಿಯ ಅವಶ್ಯಕತೆಯಿತ್ತು. ಏಕೆ ?

17. ಹೂಡಿಕೆ ಹಿಂತೆಗೆತ ಎಂದರೇನು ?

18. ಕೈಗಾರಿಕೀಕರಣ ಎಂದರೇನು ?

19. ಬಡತನ ಎಂದರೇನು ?

20. ಬಡತನ ರೇಖೆಯು ಏನನ್ನು ಸೂಚಿಸುತ್ತದೆ ?

21. ಕೂಲಿಗಾಗಿ ಕಾಳು ಯೋಜನೆಯ ಮುಖ್ಯ ಉದ್ದೇಶವೇನು ?

22. ದಿರಾ ಸ್ಮಿಥ್‌ರವರ ಪ್ರಕಾರ ಕೇಂದ್ರ ಬ್ಯಾಂಕ್ ಎಂದರೇನು ?

23. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ಕಛೇರಿ ಎಲ್ಲಿದೆ ?

24. ವ್ಯಾಪಾರ ಎಂದರೇನು ?

25. ವಿದೇಶಿ ವಿನಿಮಯ ಎಂದರೇನು ?

26. ವಿದೇಶಿ ವ್ಯಾಪಾರ ಎಂದರೇನು ?

**IV. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ : 14 × 2 = 28**

27. ಅನಭಿವೃದ್ಧಿ ರಾಷ್ಟ್ರಗಳಲ್ಲಿ ಉತ್ತಮ ಯೋಜನೆಗಳು ಜಾರಿಗೊಳ್ಳುವಲ್ಲಿ ವಿಫಲವಾಗುತ್ತವೆ. ಏಕೆ ?

28. ಲೇವಾದೇವಿಗಾರರಿಂದಾಗುವ ಅನಾನುಕೂಲತೆಗಳನ್ನು ಪಟ್ಟಿಮಾಡಿ.

29. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕಿನ ಕಾರ್ಯಗಳೇನು ?

30. ಭಾರತದಲ್ಲಿ ಕೈಗಾರಿಕಾಭಿವೃದ್ಧಿಯ ಮಹತ್ವವನ್ನು ವಿವರಿಸಿ.

31. ಸಣ್ಣ ಪ್ರಮಾಣದ ಕೈಗಾರಿಕೆಯ ಲಕ್ಷಣಗಳನ್ನು ತಿಳಿಸಿ.

32. ಭಾರತದಲ್ಲಿ ಬಡತನವು ವ್ಯಾಪಕವಾಗಿದೆ. ಏಕೆ ?

33. 'ಪ್ರಧಾನ ಮಂತ್ರಿ ಸಮಗ್ರ ನಗರ ಬಡತನ ನಿರ್ಮೂಲನಾ ಕಾರ್ಯಕ್ರಮವು ನಗರಗಳಲ್ಲಿ ಬಡತನ ಮಟ್ಟವನ್ನು ತಗ್ಗಿಸಿದೆ.' ಸಮರ್ಥಿಸಿ.

34. ಸಾಮಾಜಿಕ ಮೂಲಭೂತ ಸೌಕರ್ಯಗಳು ಮಾನವರ ಕ್ಷಮತೆಯನ್ನು ಹೆಚ್ಚಿಸುತ್ತದೆ. ಹೇಗೆ ?

35. ವಾಯು ಸಾರಿಗೆಯು ದೇಶದ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ?

36. ಭಾರತದ ರಸ್ತೆಗಳ ಪ್ರಕಾರಗಳನ್ನು ಹೆಸರಿಸಿ.

37. ಹಣಕಾಸು ಮೇಲ್ವಿಚಾರಣೆ ಮಂಡಳಿಯು ಹೇಗೆ ಕಾರ್ಯನಿರ್ವಹಿಸುತ್ತದೆ ?

38. ರಿಸರ್ವ್ ಬ್ಯಾಂಕಿನ ಕೇಂದ್ರ ಮಂಡಳಿ ಹೇಗೆ ರಚಿತವಾಗಿದೆ ?

39. ಭಾರತದ ರಫ್ತು ವ್ಯಾಪಾರ ದಿಕ್ಕನ್ನು ವಿವರಿಸಿ.

40. ಭಾರತದ ಆಮದುಗಳನ್ನು ಪಟ್ಟಿಮಾಡಿ.

**V. ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ ಆರು* ವಾಕ್ಯಗಳಲ್ಲಿ ಉತ್ತರಿಸಿ : 6 × 3 = 18**

41. ಅಭಿವೃದ್ಧಿ ಹೊಂದಿದ ದೇಶಗಳ ಪ್ರಮುಖ ಲಕ್ಷಣಗಳನ್ನು ತಿಳಿಸಿ.

42. ಕೃಷಿ ಹಣಕಾಸಿನ ಅಗತ್ಯತೆಯನ್ನು ವಿವರಿಸಿ.

43. ಸಣ್ಣ ಕೈಗಾರಿಕೆಗಳ ಸಮಸ್ಯೆಗಳನ್ನು ಪಟ್ಟಿ ಮಾಡಿ.

44. ಬಡತನದ ಎರಡು ಪ್ರಕಾರಗಳನ್ನು ವಿವರಿಸಿ.

45. ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳಾವುವು ?

46. ಪ್ರತಿಯೊಂದು ರಾಷ್ಟ್ರಕ್ಕೂ ವಿದೇಶಿ ವ್ಯಾಪಾರ ಅತ್ಯವಶ್ಯಕ. ಏಕೆ ?

**VI. ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** **1 × 4 = 4**

47. ಅನಭಿವೃದ್ಧಿ ಆರ್ಥಿಕತೆಯ ಲಕ್ಷಣಗಳೇನು ?